

## ರಣರಂಗವೂ ಕಲ್ಯಾಣ ಮಂಟಪವೂ...

ತಮ್ಮ ಕುಟುಂಬವಿಡೀ ಚುನಾವಣಾ ರಾಜಕಾರಣದಲ್ಲಿ ತೊಡಗಿಕೊಂಡಿದ್ದರೆ, ನಿಖಿಲ್ ಕುಮಾರ್ ಸಿನಿಮಾ ಚಟುವಟಿಕೆಗಳಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದಾರೆ. ಚೊಚ್ಚಿಲ ಸಿನಿಮಾ 'ಜಾಗ್ವಾರ್' ನಂತರದ ಅವಕಾಶಗಳ ಬಗ್ಗೆ ಹೆಚ್ಚು ಚೂಸಿಯಾಗಿರುವ ಅವರ ಹೊಸ ಸಿನಿಮಾ ಕಳೆದ ವಾರವಷ್ಟೇ ಮುಹೂರ್ತ ನಡೆಸಿದೆ. 'ಸೀತಾರಾಮ ಕಲ್ಯಾಣ' ಶೀರ್ಷಿಕೆಯ ಈ ಸಿನಿಮಾದ ಶೂಟಿಂಗ್ ಸದ್ಯದಲ್ಲೇ ಆರಂಭವಾಗಲಿದೆ.

ಎ. ಹರ್ಷ 'ಸೀತಾರಾಮ ಕಲ್ಯಾಣ'ದ ನಿರ್ದೇಶಕರು. ಪುನೀತ್ ನಟನೆಯ 'ಅಂಜನೀಪುತ್ರ' ತೆರೆಕಾಣಲು ಸಿದ್ಧವಾಗಿರುವ ಬೆನ್ನಿಗೇ ಹರ್ಷ ಸೀತಾರಾಮನನ್ನು ಕೈಗೆತ್ತಿಕೊಂಡಿದ್ದಾರೆ. ಸಾಹಸ ಪ್ರಧಾನ ಕಥನದೊಂದಿಗೆ ರಂಜನೆಯ ಪ್ಯಾಕೇಜನ್ನು ಈ ಚಿತ್ರದಲ್ಲವರು ಉಣಬಡಿಸಲಿದ್ದಾರಂತೆ. 'ಜಾಗ್ವಾರ್' ಚಿತ್ರದ ನಂತರ ನಿಖಿಲ್ ಪೂರ್ಣ ಪ್ರಮಾಣದ ನಾಯಕನಾಗಿ ನಟಿಸುತ್ತಿರುವ ಸೀತಾರಾಮನ ಕಥನಕ್ಕೆ ಎಚ್.ಡಿ. ಕುಮಾರಸ್ವಾಮಿ ಅವರೇ ಬಂಡವಾಳ ಹೂಡುತ್ತಿದ್ದಾರೆ. ರವಿ ಬಸ್ರೂರು ಸಂಗೀತ ಹಾಗೂ ಸ್ವಾಮಿ ಛಾಯಾಗ್ರಹಣ ಚಿತ್ರಕ್ಕಿದೆ. ತಮಿಳಿನ ಹಿರಿಯನಟ ಶರತ್‌ಕುಮಾರ್ ನಾಯಕನ ತಂದೆಯ ಪಾತ್ರದಲ್ಲಿ ಹಾಗೂ ರಚಿತಾ ರಾಮ್ ನಾಯಕಿಯಾಗಿ ನಟಿಸುತ್ತಿದ್ದಾರೆ.

'ಕುರುಕ್ಷೇತ್ರ' ನಿಖಿಲ್ ನಟನೆಯ ಮತ್ತೊಂದು ಸಿನಿಮಾ. ನಾಗಣ್ಣ ನಿರ್ದೇಶನದ ಈ ಚಿತ್ರದಲ್ಲಿ ನಿಖಿಲ್ ಅಭಿಮನ್ಯು ಪಾತ್ರದಲ್ಲಿ ನಟಿಸಿದ್ದಾರೆ. ಪಾತ್ರ ಪುಟ್ಟದಾದರೂ ಮಹತ್ವದ್ದಾಗಿರುವುದು ಹಾಗೂ ಎರಡನೇ ಚಿತ್ರವೇ ಪೌರಾಣಿಕ ಕಥನವಾಗಿರುವುದು ನಿಖಿಲ್‌ಗೆ ಖುಷಿ ಕೊಟ್ಟಿದೆ. ಯುದ್ಧ ದೃಶ್ಯಗಳ ಚಿತ್ರೀಕರಣದ ರಸಾನುಭವವನ್ನು ರೋಚಕವಾಗಿ ಮೆಲುಕು ಹಾಕುವ ಅವರು, 'ಕುರುಕ್ಷೇತ್ರ'ವನ್ನು ತಮ್ಮ ವೃತ್ತಿಬದುಕಿನ ಮಹತ್ವಾಕಾಂಕ್ಷೆಯ ಚಿತ್ರವೆಂದೇ ಭಾವಿಸಿದ್ದಾರೆ.

■ ರಘು

## ಹೊಸ ಪದ್ಮಾವತಿ!

'ಜಾನಿ ಮೇರಾ ನಾಮ್' ಸಿನಿಮಾದ 'ಊರಿಗೊಬ್ಬೆ ಪದ್ಮಾವತಿ' ನಟಿ ರಮ್ಯಾ ಅವರ ಜನಪ್ರಿಯತೆಯ ಜೊತೆಗೆ ತಳಕು ಹಾಕಿಕೊಂಡಿರುವ ಗೀತೆ. ಈಗ ಹಳೆಯ ಪದ್ಮಾವತಿ ಹೆಚ್ಚೂಕಡಿಮೆ ತೆರೆಮರೆಗೆ ಸರಿದಿದ್ದಾಗಿದೆ. ಹೊಸದಾಗಿ ರೂಪುಗೊಳ್ಳುತ್ತಿರುವ 'ಜಾನಿ ಜಾನಿ ಎಸ್ ಪಪ್ಪ' ಚಿತ್ರದ ನೂತನ ಪದ್ಮಾವತಿಯಾಗಿ ರಚಿತಾ ರಾಮ್ ಕಾಣಿಸಿಕೊಳ್ಳುತ್ತಿದ್ದಾರೆ.

'ಜಾನಿ ಜಾನಿ ಎಸ್ ಪಪ್ಪ' ದುನಿಯಾ ವಿಜಯ್ ನಿರ್ಮಾಣ ಮತ್ತು ನಟನೆಯ ಸಿನಿಮಾ. ಜಾನಿಗೆ ಜೋಡಿಯಾಗಿ ರಚಿತಾ ಕಾಣಿಸಿಕೊಳ್ಳುತ್ತಿದ್ದಾರೆ. ವಿಜಯ್ ಹಾಗೂ ರಚಿತಾ ನಟನೆಯ ಚೊಚ್ಚಲ ಸಿನಿಮಾವಿದು. ಕಾಲೋನಿಗೆ ಬರುವ ಆಧುನಿಕ ಮನೋಧರ್ಮದ ಹುಡುಗಿಯಾಗಿ ಚಿತ್ರದಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದಾರಂತೆ. ನಾಯಕಿಯ ತಂದೆಯ ಪಾತ್ರದಲ್ಲಿ ಅಚ್ಯುತ ಕುಮಾರ್ ನಟಿಸುತ್ತಿದ್ದಾರೆ.

ಪ್ರೀತಂ ಗುಬ್ಬಿ ನಿರ್ದೇಶನದ ಈ ಚಿತ್ರದ ಶೂಟಿಂಗ್‌ನ ಮೊದಲ ಷೆಡ್ಯೂಲ್ ಈಗಾಗಲೇ ಮುಗಿದಿದೆ. ನಗರದ ಕಾಲೋನಿಯೊಂದರಲ್ಲಿ ನಡೆಯುವ ಕಥೆಯಲ್ಲಿ, ಮಧ್ಯಮವರ್ಗದ ಜನರ ತವಕ–ತಲ್ಲಣಗಳನ್ನು ಕಟ್ಟಿಕೊಡುವ ಪ್ರಯತ್ನ ನಿರ್ದೇಶಕರದು. ಹಾಡು–ಹೊಡೆದಾಟ, ವಿನೋದ–ವಿಷಾದಗಳ ಹದವಾದ ಪಾಕ ಚಿತ್ರದಲ್ಲಿ ಇರುವುದಂತೆ.

ಚಿತ್ರಕ್ಕಾಗಿ ಕಲಾ ನಿರ್ದೇಶಕ ಮೋಹನ್ ಬಿ. ಕೆರೆ ಅವರು ಮೋಹಕ ಸೆಟ್ ಒಂದನ್ನು ರೂಪಿಸಿದ್ದಾರೆ. 150 ಕೆಲಸಗಾರರು ಎರಡು ತಿಂಗಳಿಗೂ ಹೆಚ್ಚು ಕಾಲ ಕೆಲಸ ಮಾಡಿ ರೂಪಿಸಿರುವ ಈ ಸೆಟ್‌ಗೆ ಒಂದೂವರೆ ಕೋಟಿ ರೂಪಾಯಿ ಖರ್ಚಾಗಿದೆಯಂತೆ. 'ಪದ್ಮಾವತಿ' ಹಾಡಿನ ಹೊಸ ಅವತರಣಿಕೆ ಈ ಚಿತ್ರದಲ್ಲೂ ಕಾಣಿಸಿಕೊಳ್ಳಲಿದೆ. ಹಿಂದಿನ ಸಿನಿಮಾದ ಯಶಸ್ವಿ ಜೋಡಿ ವಿಜಯ್— ರಂಗಾಯಣ ರಘು ಇಲ್ಲೂ ಜೊತೆಯಾಗಿದ್ದಾರೆ.

